
ಅನ್ನವನ್ನೇ ಮೂರು ಹೊತ್ತೂ ಜೀವನಪೂರ್ತಿ ತಿಂದ 'ಅನ್ನದ ಋಣ'ವಾದರೂ ಇವರನ್ನು ಕಾಡುವುದಿಲ್ಲವೆ? ಸಂಬಳ ಸಾರಿಗೆಯಿಲ್ಲದೆ, ಗೌರವವಿಲ್ಲದೆ, ಹಕ್ಕಿನ ಸವಲತ್ತುಗಳಿಲ್ಲದೆ ಹೆಣ್ಣುಮಕ್ಕಳು ಜೀವಮಾನವಿಡೀ ಮಾಡುವ ಕಾಯಕವನ್ನು 'ಅತ್ಯುತ್ಪಾದನೆ'ಯಾಗಿಯೇ ಗುರುತಿಸಬೇಕಾದದ್ದು, ಅದಕ್ಕೆ ವಿರುದ್ಧವಾಗಿ 'ಅನುತ್ಪಾದಕ'ವೆಂದು ಪರಿಗಣಿಸುವುದು ಅವಳ ಶ್ರಮ ಮಾತ್ರವಲ್ಲ - ವ್ಯಕ್ತಿತ್ವ, ಬದುಕು, ಪೊರೆಯುವ ಶಕ್ತಿ ಎಲ್ಲದರ ಅವಗಣನೆಯಷ್ಟೇ ಅಲ್ಲ, ನಿರಾಕರಣೆಯೇ ಅಲ್ಲವೆ?

ಇಂಥ ನೂರಾರು ವಿಪರ್ಯಾಸಗಳನ್ನು, ಹಗಲು ಮೋಸವನ್ನು, ಕಣ್ಣಿದ್ದವರ(!) ಭಂಡತನವನ್ನು 'ಇವಳ ಭಾರತ' ಬಯಲಾಗಿಸುತ್ತಲೇ ಹೋಗುತ್ತವೆ.

ಭೈರಪ್ಪನವರ 'ಕವಲು' ಕಾದಂಬರಿಯನ್ನು ಕುರಿತು ರೂಪ ಬರೆಯುವುದು ಕೂಡ ಇದೇ ಬಗೆಯ ಅನಂತವಾದ ವಿಷಾದದಲ್ಲಿ. ತಪಸ್ಸು ಮಾಡಿ, ಯಾವುದೋ ಅಮೃತ ಘಳಿಗೆಯಲ್ಲಿ 'ಜ್ಞಾನೋದಯ'ವಾಗಿ ಇವರಿಗೆ ಹೆಣ್ಣಿನ ಬಗೆಗೆ ಅರಿವು ಹುಟ್ಟಬೇಕಿಲ್ಲ. ಅಮೃತದಂತಹ ಹಾಲನ್ನು ಕುಡಿಸಿದ ಅದೇ ತಾಯೊಲವು, ಪ್ರಾಣಕ್ಕೆ ಪ್ರಾಣವಾದ ಸಖಿಯೊಲವು, ಎಲ್ಲ ಎಲ್ಲವೂ ಅದು ಹೇಗೆ ಅದನ್ನು ಗುರುತಿಸಬೇಕಾದ, ಗೌರವಿಸಬೇಕಾದ ಹೊತ್ತಿನಲ್ಲಿ ಏನೂ ಇಲ್ಲದ ಶೂನ್ಯದಂತೆ ಮಾಯವಾಗಿಬಿಡುತ್ತವೆ? ಬೇರೆ ಯಾರಿಲ್ಲದಿದ್ದರೂ ತಾಯ್ತನವನ್ನೇ ಉಂಡು ಬೆಳೆದ 'ಸತ್ಯ'ವಾದರೂ ಕಣ್ಣೆದುರಿಗೆ ಬಾರದೆ ಹೆಣ್ಣು ಅನುತ್ಪಾದಕ, ಅನುಪಯುಕ್ತ, ಅಯೋಗ್ಯ, ಬುದ್ಧಿಗೇಡಿ ಪ್ರಾಣಿಯಾಗಿ ಬಿಡುತ್ತಾಳೆ? ಓದಿರುವ ಹೆಣ್ಣು ಗಂಡಾಗುವ, ಓದದೇ ಇರುವ ಗಂಡು ಹೆಣ್ಣಾಗಿ ಬಿಡುವ ಅತಾರ್ಕಿಕತೆಯನ್ನು, ಗಂಡಿನ ಮೃಗತ್ವವನ್ನು ಎತ್ತಿ ಹಿಡಿಯುವ ಕಾದಂಬರಿಯನ್ನು ಬರೆದ ಮನಸ್ಥಿತಿ ಮಾತ್ರ ನಮ್ಮಲ್ಲಿ ಗಾಬರಿ ಹುಟ್ಟಿಸುವುದಲ್ಲ, ಅದನ್ನು ಅನಂತವಾಗಿ ಮೆಚ್ಚುತ್ತಲೇ ಇರುವ, ಮರುಮುದ್ರಣಕ್ಕೆ ಕಾರಣರಾಗುವ ಓದುಗರ ಸಂಖ್ಯೆ ಮತ್ತು ಮನಸ್ಥಿತಿ ನಮ್ಮನ್ನು ಕಂಗಾಲು ಮಾಡುತ್ತದೆ. ಹುಲ್ಲಿನಷ್ಟಾದರೂ ಬುದ್ಧಿಯಿರುವ ಹುಲುಮಾನವರಿಗೂ ಅರ್ಥವಾಗುವಂಥದ್ದನ್ನು ಬುದ್ಧಿವಂತರಿಗೆ ಅರ್ಥ ಮಾಡಿಸಲು ಭೈರಪ್ಪನವರು ಹೊರಡುವುದು ಮತ್ತು



ಓದಿದ ಹೆಣ್ಣುಗಳೇ ಕೌಟುಂಬಿಕ ವಿಘಟನೆಗೆ ಕಾರಣ ಎನ್ನುವ ಅಮೂಲ್ಯ ಜ್ಞಾನವನ್ನು ಪಡೆದು ಬೀಗುವ ಓದುಗರು... ಈ ಹಿನ್ನೆಲೆಯಲ್ಲಿ ನಮ್ಮ ಭವಿಷ್ಯವಿರಲಿ, ಅಮೃತ ಮಹೋತ್ಸವದ ವರ್ತಮಾನ ಹೇಗಿದೆ?

ಶಿಕ್ಷಣ , ಉದ್ಯೋಗ , ಕೌಟುಂಬಿಕ ನಿರ್ಬಂಧಗಳು, ಅಚಲ ಹಿಮಾಚಲದಂತಹ ಮೌಲ್ಯವ್ಯವಸ್ಥೆ - ಈ ಎಲ್ಲವೂ ಹೆಣ್ಣನ್ನು ಮತ್ತೆ ಚೌಕಟ್ಟಿನ ಚಿತ್ರಗಳಾಗಿಸುವ ಸಾಗರದೆದುರು ಈಜುವುದಲ್ಲದೆ ಬೇರೆ ದಾರಿಯಿಲ್ಲ ಎನ್ನುವ ಕಟು ಸತ್ಯದ ಜೊತೆಗಿನ ಸಖ್ಯದ ವ್ಯಾಖ್ಯಾನ ಈ ಕೃತಿ. ರೂಪ ಅವರ ಬಗೆಗಿನ ಸಹಜ ಪ್ರೀತಿ ಮತ್ತು ಗೌರವ ಈ ಕೃತಿಯ ಓದಿನ ನಂತರ ಹೆಮ್ಮೆಯಾಗಿ, ಭರವಸೆಯಾಗಿ ವಿಸ್ತಾರಗೊಳ್ಳುತ್ತದೆ. ರೂಪ ಸಂತತಿ ಸಾಸಿರವಾಗಲಿ.

●